**2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ಎಸ್.ಸಿ. ನಂ. 96/2019**

P.W : 18

C.W: 4

**ದಿನಾಂಕ 13.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ವೆಂಕಟೇಶ್

**ತಂದೆಯ ಹೆಸರು** : ಚಿಕ್ಕತಿಮ್ಮಯ್ಯ

**ವಯಸ್ಸು** : 36 ವರ್ಷ

**ವೃತ್ತಿ** : ದಿನಸಿ ಅಂಗಡಿಯಲ್ಲಿ ಕೆಲಸ

**ವಾಸಸ್ಥಳ** : ವಡ್ಡರ ಕುಪ್ಪೆ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿ ನಿ.ಪಿ.2 ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ನಿ.ಪಿ.2 ಕ್ಕೆ ಸುಮಾರು 5 ರಿಂದ 6 ವರ್ಷಗಳ ಹಿಂದೆ ಕುಣಿಗಲ್ ಕೊತ್ತಗೆರೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ.2 ಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

ಸಾಕ್ಷಿ ನಿ.ಪಿ.3 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಸಿ) ಎಂದು ಗುರುತಿಸಲಾಯಿತು. ನಿ.ಪಿ.3 ಕ್ಕೆ ಸುಮಾರು 2 ರಿಂದ 3 ವರ್ಷಗಳ ಹಿಂದೆ ಕುಣಿಗಲ್ ಕೊತ್ತಗೆರೆ ಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ.3 ಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

*(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವುದರಿಂದ ಪ್ರತಿಕೂಲ ಪಕ್ಷಗಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಲಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಸರ್ಕಾರಿ ಅಬಿಯಾೀಜಕರು ಬಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋದಾತ್ಮಕವಾಗಿ*

*ಸಾಕ್ಷಿ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಗಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಬಿಯಾೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಜಿತ ಎಂದು ಮನಗಂಡು ಅನುಮತಿ ನೀಡಲಾಯಿತು)*

**<u>ಪಾಟೀಸವಾಲು ಸರ್ಕಾರಿ ಅಭಿಯೋಜಕರಿಂದ</u>**

3. ದಿ.15.11.2018 ರಂದು ಬೆಳಿಗ್ಗೆ 08.30 ರಿಂದ 09.30 ರವರೆಗೆ ಕುಣಿಗಲ್ ವೃತ್ತ ನಿರೀಕ್ಷಕರು ನನ್ನನ್ನು ಹಾಗೂ ಚಾ.ಸಾ.3 ರವರನ್ನು ಕುಣಿಗಲ್ ಕೊತ್ತಗೆರೆಗೆ ಹೋಗುವ ರಸ್ತೆ ಕುಣಿಗಲ್ ದೊಡ್ಡ ಕೆರೆ ಬ್ರಿಡ್ಜ್ ಕೆಳಗೆ ಒಂದು ಪಂಚನಾಮೆ ಮಾಡ ಬೇಕಾಗಿದ್ದು ಪಂಚರಾಗಿ ಸಹಕರಿಸಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾವುಗಳು ಒಪ್ಪಿಕೊಂಡ ನಂತರ ನಮ್ಮ ಸಮಕ್ಷಮ ಕೃತ್ಯ ನಡೆದ ಸ್ಥಳದಲ್ಲಿ ಪಿರ್ಯಾದಿ ತೋರಿಸಿದ ರೀತ್ಯ ಆತನನ್ನು ಗಣಪತಿ ಬಸ್ ನಿಂದ ಇಬ್ಬರು ಆಸಾಮಿಗಳು ಕೆಳಗೆ ಇಳಿಸಿದ ಸ್ಥಳದಲ್ಲಿ ನಮ್ಮ ಸಮಕ್ಷಮ ನಿ.ಪಿ.2 ರಂತೆ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ.

4. ನಂತರ ವೃತ್ತ ನಿರೀಕ್ಷಕರು ನನ್ನನ್ನು ಹಾಗೂ ಚಾ.ಸಾ.3 ರವರನ್ನು ಪಿರ್ಯಾದಿ ತೋರಿಸಿದ ರೀತ್ಯ ಆತನನ್ನು ದಿ. 14.11.2018 ರಂದು ಆರೋಪಿಗಳು ಬಸ್ ನಿಂದ ಕಳೆಗಿಳಿಸಿಕೊಂಡು ಆತನನ್ನು ಕರೆದುಕೊಂಡು ಹೋದ ಸ್ಥಳದಲ್ಲಿ ಬೆಳಿಗ್ಗೆ 09.45 ರಿಂದ 10.30 ರವರೆಗೆ ಕುಣಿಗಲ್ ಕೊತ್ತಗೆರೆ ಬಸ್ ನಿಲ್ದಾಣದ ಬಳಿ ನಿ.ಪಿ.3 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ.

5. ಆರೋಪಿಗಳು ನನಗೆ ಪರಿಚಿತರಾಗಿದ್ದು ಅವರನ್ನು ಶಿಕ್ಷೆಯಿಂದ ಸಪ್ಪಿಸುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ ಜಿ.ಎನ್ ಮತ್ತು ಬಿಎಸ್.ಜೆ. ವಕೀಲರರಿಂದ**

**ಏನೂ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.